ಅಪ್ಪನ ಕಣ್ಣು ತೇವದಿಂದ ದಿಗಿಲುಗೊಂಡಿದ್ದವು.

"ಇವರು ಮಾಡಿದ ಅನ್ಯಾಯಕ್ಕೆ ಅರ್ನಾಬ್ ಗೋಸ್ವಾಮಿಗೆ ಹೇಳಿದರೆ ಇವರಿಗೆ ಚೆನ್ನಾಗಿ ಉಗಿಯುತ್ತಾನೆ" ಕಿರುಚುತ್ತಿದ್ದಾನೆ ತಾತ.

"ಟೀವಿ9 ಅವರಿಗೆ ಹೇಳೋಣ" ಎನ್ನುತ್ತಿದ್ದಾಳೆ ಅಜ್ಜಿ.

"ಇವು ಯಾವುವು ಬೇಡ. ನಮ್ಮ ಪಕ್ಕದ ಮನೆಯವನು ಎಬಿಎನ್‌ನಲ್ಲಿ ಜರ್ನಲಿಸ್ಟ್. ಓಪನ್ ಹಾರ್ಟ್ ವಿತ್ ಆರ್.ಕೆ. ಪ್ರೋಗ್ರಾಮ್‌ಗೆ ಕರೆಯಲು ಹೇಳುತ್ತೇನೆ" ಎನ್ನುತ್ತಿದ್ದಾಳೆ ಚಿಕ್ಕಮ್ಮ.

ಮದುವೆ ಹೀಗೆ ರದ್ದಾದುದು ಮನೆಯಲ್ಲಿರುವ ಎಲ್ಲರನ್ನೂ ದಂಗು ಬಡಿಸಿ ಅಧೈರ್ಯಕ್ಕೆ ಒಳಗು ಮಾಡಿದೆಯೆಂಬುದು ಅರ್ಥವಾಯಿತು. ಅವರಿಗೆ ಯಾವ ಶಿಕ್ಷೆಯಾಗಬೇಕು ಎಂಬ ಟಾಪಿಕ್ ಅನ್ನು ಮರೆತು ಈ ಹುಡುಗಿಗೆ ಇನ್ನು ಮದುವೆಯ ಯೋಗವೇ ಇಲ್ಲವಲ್ಲ ಎಂಬ ದಿಗಿಲಿನಲ್ಲಿ ಮುಳುಗಿದರು. ಟೀವಿಯಲ್ಲಿನ ಬ್ರೇಕಿಂಗ್ ನ್ಯೂಸ್‌ನಂತೆ ಈಗ ನಮ್ಮ ಲಿವಿಂಗ್ ರೂಮ್‌ನಲ್ಲಿ ಈ ಮದುವೆ ರದ್ದಾದ ನ್ಯೂಸ್ ಮೊಳಗತೊಡಗಿತು.

"ಅವನು ಎಷ್ಟೊಂದು ಪ್ರೀತಿಯಿಂದಿದ್ದ. ನನ್ನ ಸೊಸೆಯೆಂದು ಆಕೆ ಎಷ್ಟು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಇದು ಹೇಗೆ ಸಾಧ್ಯ" ಗೋಳಿಡುತ್ತಿದ್ದಾರೆ ಅಮ್ಮ.

"ಹೈಪೋಥಿಟಿಕಲ್ ಪ್ರಶ್ನೆ. ಇಷ್ಟೆಲ್ಲಾ ನಡೆದ ಮೇಲೂ ಸಹ ಚೈತನ್ಯ ನನ್ನನ್ನು ಮದುವೆಯಾಗಬೇಕೆಂದು ಬಯಸುವುದು ಅತಿಯಾಸೆಯೆನಿಸುತ್ತಿದೆ. ಆದರೂ ನೀನು ನನ್ನ ತಾಯಿಯಂತಲ್ಲದೆ ಚೈತನ್ಯನ ತಾಯಿಯಂತೆ ಒಮ್ಮೆ ಯೋಚಿಸು. ಆಗ ನೀನು ಹೇಗೆ ನಡೆದುಕೊಳ್ಳುವೆ" ಎಂದು ಕೇಳಿದೆ.

"ಸಾರಿ... ಅಮ್ಮನಲ್ಲವೆ ಹೋಗಲಿ ಬಿಡು, ಇದಕ್ಕಿಂತಲೂ ದೊಡ್ಡ ಮನಸ್ಸಿರುವವನನ್ನು ಹುಡುಕಿ ಮದುವೆ ಮಾಡುತ್ತೇವೆ" ನನಗೆ ಮದುವೆಯಾಗದೆಂದು ಹೆದರುತ್ತಿರಬಹುದೆಂದು ಗಾಬರಿಯಿಂದ ಹೇಳಿದಳು ಅಮ್ಮ.

"ಸಾರಿ ಯಾಕೆ ಬಿಡಮ್ಮ. ನನ್ನ ವಿಷಯದಲ್ಲಿ ನೀನು ಅಮ್ಮನಲ್ಲವೆ" ಎಂದೆ.

ಅಸಲಿಗೆ ಏನೂ ನಡೆದಿಲ್ಲವೆಂಬಂತೆ ಎಲ್ಲವೂ ಸಹಜವಾಗಿಯೇ ಇದೆ ಎಂಬಂತೆ ತೋರಿಸಿಕೊಳ್ಳಲು ಎಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ಮಗ್ನರಾದರು. ಟೀವಿ ನೋಡುವವರು ನೋಡುತ್ತಿದ್ದಾರೆ.

ರಿಮೋಟ್ ತಿರುಗಿಸುತ್ತಾ 'ಏನೀ ಪ್ರವಾಹಗಳು' ಎನ್ನುತ್ತಿದ್ದಾರೆ ಯಾರೋ. ಚಾನಲ್ ತಿರುಗಿಸಿದೊಡನೆ "ಸ್ವಲ್ಪ ಅದನ್ನಿಡಿ" ಎಂದೆ.

ಇಟ್ಟರು.

ಉದ್ಧೃತವಾದ ಪ್ರವಾಹ. ಮಧ್ಯವಯಸ್ಕನೊಬ್ಬ ಒಂದು ಗಿಡದ ಮೇಲೆ ದುರ್ಬಲ ರೆಂಬೆಯ ತುದಿಗೆ ನಿಂತು ಹೇಗೋ ತನ್ನ ಪ್ರಾಣ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಜಿಲ್ಲೆಯ ಆಡಳಿತಾಂಗವೆಲ್ಲವೂ ಶತಾಯಗತಾಯ ಅವನನ್ನು ಕಾಪಾಡಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಅಲ್ಲಿಗೆ ತಲುಪುವುದು ತುಂಬಾ ಕಷ್ಟವೆಂದು ವರದಿಗಾರ ವರದಿ ಒಪ್ಪಿಸುತ್ತಿದ್ದಾನೆ.

ಅವನೊಬ್ಬನೆ ಒಂಟಿಯಾಗಿ ಅಂಗೈಯಲ್ಲಿ ಜೀವ ಹಿಡಿದುಕೊಂಡು ಸಣ್ಣ ಕೊಂಬೆಯನ್ನು ಹಿಡಿದು ಜೋತಾಡುವುದನ್ನು ನೋಡಿ ಅಂದು ನಾನು ಮಾಡಿದ ನನ್ನ ಜೀವನದ ಹೋರಾಟ ನೆನಪಾಯಿತು. ಎಷ್ಟೋ ಮಂದಿ ಜೊತೆಯಾಗಿ ನಿಂತರು. ಆದರೆ ಹಲ್ಲು ಬಿಗಿಹಿಡಿದು ಹಿಂಸೆಯನ್ನು ಅನುಭವಿಸಿದ್ದು ನಾನು ಮಾತ್ರ. ಇನ್ನು ಮುಂದೆ ನಾನು ನಾನಾಗಿಯೇ ನಿಲ್ಲಬೇಕು.

"ಅಪ್ರಾಪ್ತರಿಗೆ ಹೇಗೂ ದೊಡ್ಡ ಶಿಕ್ಷೆಯಾಗಲಾರದು. ಉಳಿದವರಿಗಾದರೂ ಗ..." ಯಾವುದೋ